

بسم اللهِ الرّحمٰن الرّحيم

# ಜರ್ಮನ್ ಜಲ್ಸಾ: ಅಹ್ಮದಿಯ್ಯಾ ಲೋಕದಲ್ಲಿ ಒಳಿತಿನಲ್ಲಿ ಮುಂದೆ ಸಾಗುವ ಓಟದಲ್ಲಿ ನೀವು ಹಿಂದೆ ಉಳಿಯದಿರಿ!!!

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಪಂಚಮ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಜರ್ಮನ್ ಜಲ್ಸಾ ಉದ್ಘಾಟನೆ ಮಾಡುತ್ತಾ ನೀಡಿದ **ಜುಮುಅ ಖುತುಬದ ಸಾರಾಂಶ**)

ತಶಹ್ಹುದ್, ತಅವ್ವುಝ್, ಸೂರತುಲ್ ಫಾತಿಹಾ ತಿಲಾವತ್ ಮಾಡಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:

ಅಲ್ಲಾಹನ ಅನುಗ್ರಹದಿಂದ ಈ ಖುತುಬದೊಂದಿಗೆ ಇಂದು ಜರ್ಮನಿಯ ಜಲ್ಸಾ ಸಾಲಾನ ಪ್ರಾರಂಭವಾಗುತ್ತದೆ. ಜಲ್ಸಕ್ಕೆ ಬರುವವರ ಸಂಖ್ಯೆ ಅಲ್ಲಾಹನ ಅನುಗ್ರಹದಿಂದ ಪ್ರತಿವರ್ಷ ವರ್ಧಿಸುತ್ತಾ ಇರುತ್ತದೆ. ಈ ವರ್ಷ ಸಹ ಸಂಖ್ಯೆ ವರ್ಧಿಸುವುದು– **ಇನ್‌ಶಾ ಅಲ್ಲಾಹ್**. ಜಲ್ಸಕ್ಕೆ ಆಗಮಿಸುವವರ ಸಂಖ್ಯೆ ವರ್ಧಿಸುತ್ತಾ ಇರಬೇಕು. ಏಕೆಂದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು, ಜಲ್ಸದಲ್ಲಿ ಜನರು ಹೆಚ್ಚು ಹೆಚ್ಚಾಗಿ ಭಾಗವಹಿಸಬೇಕೆಂದು ಪದೇ ಪದೇ ಹೇಳಿದ್ದರು. ನಮ್ಮ ಜಮಾಅತಿನ ಜನಸಂಖ್ಯೆ ವರ್ಧಿಸುವ ಹಾಗೆ ಜಲ್ಸದಲ್ಲಿ ಹಾಜರಿರುವವರ ಸಂಖ್ಯೆ ಸಹ ವರ್ಧಿಸಬೇಕಾಗಿದೆ. ಜನರು ಇದಕ್ಕೋಸ್ಕರ ಕಷ್ಟ ಅನುಭವಿಸಿಯಾದರೂ ಆಗಮಿಸಬೇಕಾಗಿದೆ. ಜಲ್ಸದಲ್ಲಿ ಸೇರುವ ಸಂದರ್ಭವನ್ನು ಅಲ್ಲಾಹನು ನಿಮಗೆ ದಯಪಾಲಿಸಿರುವನು. ನೀವು ಭಾಗ್ಯಶಾಲಿಗಳಾಗಿದ್ದೀರಿ. ಪಾಕಿಸ್ತಾನದಲ್ಲಿ ಜಲ್ಸ ನಡೆಸಲು ಸರಕಾರದ ನಿರ್ಬಂಧವಿದೆ. ಈ ನಿರ್ಬಂಧಗಳು ಕೊನೆಗೊಂಡು ಜಲ್ಸ ನಡೆಸುವ ಭಾಗ್ಯ ದೊರೆತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನಿರ್ದೇಶಿಸಿದ ಉದ್ದೇಶಲಕ್ಷ್ಯಗಳನ್ನು ತಲಪಲು ಪ್ರಯತ್ನಮಾಡಲು ಸಂದರ್ಭ ದೊರಕಲಿ ಎಂದು ಪಾಕಿಸ್ತಾನದ ಅಹ್ಮದಿಯರು ಆಶಿಸುತ್ತಿರುತ್ತಾರೆ. ಜಲ್ಸದಲ್ಲಿ ಸೇರುವವರಿಗೋಸ್ಕರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಮಾಡಿದ ಪ್ರಾರ್ಥನೆಯ ಲಾಭ ಪಡೆಯಲು ಅವರು ಇಚ್ಛಿಸುತ್ತಾರೆ. ಇಲ್ಲಿಗೆ ಕೆಲವು ಅತಿಥಿಗಳು ಪಾಕಿಸ್ತಾನದಿಂದ ಆಗಮಿಸಿದ್ದಾರೆ. ಅವರು ನನ್ನನ್ನು ಭೇಟಿಯಾಗಿದ್ದಾರೆ. ಅವರಲ್ಲಿ ಪುರುಷರೂ ಮಹಿಳೆಯರೂ ಇದ್ದಾರೆ. "ನಮಗೆ ನಿರಾಕರಿಸಲ್ಪಟ್ಟ ಅನುಗ್ರಹಗಳು ಪುನಃ ದೊರೆಯುವಂತಾಗಲು ಪ್ರಾರ್ಥಿಸಿರಿ" ಎಂದು ಅವರು ಅಳುತ್ತಾ ಅಪೇಕ್ಷಿಸುತ್ತಾರೆ. ನಾನು ಯಾವಾಗಲೂ ಹೇಳುತ್ತಾ ಇರುವ ಹಾಗೆ, ಪಾಕಿಸ್ತಾನದ ಅಹ್ಮದಿಯರ ಕಷ್ಟ ಬೇಗ ನಿವಾರಣೆ ಆಗಬೇಕಾದರೆ ಅವರು ಹಿಂದೆಂದಿಗಿಂತಲೂ ಹೆಚ್ಚಾಗಿ ಅಲ್ಲಾಹನ ಮುಂದೆ ಬಾಗಬೇಕು. ಅಲ್ಲಾಹನು ಬೇಗನೆ ಅನುಗ್ರಹದ ಬಾಗಿಲನ್ನು ತೆರೆದು ಕೊಡಲಿ. ದುಷ್ಕರ್ಮಿಗಳ ದೌರ್ಜನ್ಯದಿಂದಲೂ ಶತ್ರುಗಳ ವಿರೋಧಗಳಿಂದಲೂ ವಿಮೋಚನೆ ದಯಪಾಲಿಸಲಿ. ಇವೆಲ್ಲವೂ ದುಆಗಳ ಮೂಲಕ ಸಂಭವಿಸುವುವು. ಈ ಉದ್ದೇಶ ಲಕ್ಷ್ಯಗಳನ್ನು ಗಳಿಸಲು ಇದರ ಹೊರತು ಬೇರೆ ಆಯುಧವಿಲ್ಲ.

ಜಲ್ಸದ ಕಾರ್ಯಕ್ರಮಗಳಿಂದ ಧಾರಾಳ ಲಾಭಪಡೆಯಲು ಪ್ರಯತ್ನಿಸಿರಿ. ಜಲ್ಸದ ದಿನಗಳಲ್ಲೂ ಅದರ ನಂತರ ಸಹ ನೀವು ಇಲ್ಲಿ ನೋಡಿದ ಅಥವಾ ಆಲಿಸಿದ ಒಳ್ಳೆಯ ವಿಷಯಗಳನ್ನು ನಿಮ್ಮ ಜೀವಿತದ ಭಾಗಗಳನ್ನಾಗಿ ಮಾಡಿರಿ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಜಲ್ಸದ ಉದ್ದೇಶ ಸಹನೆಯೊಂದಿಗೆ ಧರ್ಮವನ್ನು ಹುಡುಕುವುದು ಮತ್ತು ಧರ್ಮವನ್ನು ಮಾತ್ರ ಆಶಿಸುವುದು ಎಂದು ಹೇಳಿದ್ದಾರೆ. ಎಂದರೆ ಜಲ್ಸಕ್ಕೆ ಆಗಮಿಸುವ ಪ್ರತಿಯೊಬ್ಬ ವ್ಯಕ್ತಿಯೂ ಸ್ವಲ್ಪ ಕಷ್ಟವನ್ನು ಅನುಭವಿಸಬೇಕಾಗಿ ಬಂದರೂ ಅದನ್ನು ಸಹನೆಯಿಂದ ಸಹಿಸಬೇಕು. ಸಹನೆಗೆ ವಿರುದ್ಧವಾದ ಯಾವ ಮಾತನ್ನೂ ಹೇಳಬಾರದು. "ನಮ್ಮೊಂದಿಗೆ ಹೀಗೆ ವರ್ತಿಸಲಾಯಿತು, ಹಾಗೆ ವರ್ತಿಸಲಾಯಿತು" ಎಂದು ಹೇಳಬಾರದು.

ನಾನು ಹಿಂದೆ ಹೇಳಿದಂತೆ ಜಲ್ಸಕ್ಕೆ ಆಗಮಿಸುವವರು ಆತ್ಮ ವಿಮರ್ಶೆ ಮಾಡಿಕೊಳ್ಳಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನಮ್ಮಿಂದ ಯಾವ ಆಧ್ಯಾತ್ಮಿಕ ಮಟ್ಟವನ್ನು ಪ್ರತೀಕ್ಷಿಸಿದ್ದರೋ **ಆ ಮಟ್ಟವನ್ನು ನಾವು ತಲಪಿರುವೆವೋ, ಅದಕ್ಕೋಸ್ಕರ ಪ್ರಯತ್ನಿಸುತ್ತಿರುವೆವೋ** ಎಂದು ನೋಡಬೇಕು. ಜಲ್ಸದ ಸಂದರ್ಭದಲ್ಲಿ ಅಲ್ಲಾಹನು ನಮಗೆ **ಹುಖೂಖುಲ್ಲಾಹ್** (ಅಲ್ಲಾಹನ ಹಕ್ಕುಗಳು) ಮತ್ತು **ಹುಖೂಖುಲ್ ಇಬಾದ್** (ಸೃಷ್ಟಿಯ ಹಕ್ಕುಗಳು) ಇವೆರಡನ್ನೂ ಈಡೇರಿಸುವ ಕರ್ಮರೂಪದ ಪ್ರಕಟಣೆಗೆ ಸಂದರ್ಭ ಒದಗಿಸಿಕೊಟ್ಟಿದ್ದಾನೆ. ಅವುಗಳನ್ನು ನಮ್ಮ ಜೀವಿತದ ಸ್ಥಿರ ಭಾಗವನ್ನಾಗಿ ಮಾಡುವ ಪ್ರಯತ್ನ ಮಾಡಬೇಕಾಗಿದೆ. **ಇನ್‌ಶಾ ಅಲ್ಲಾಹ್,** ಈ ತಿಂಗಳ ಕೊನೆಗೆ ರಮಝಾನ್ ಪ್ರಾರಂಭವಾಗುತ್ತದೆ. ಅದು ಕ್ರಿಯಾತ್ಮಕ ತರಬೇತಿಯ ತಿಂಗಳಾಗಿರುತ್ತದೆ. ಈ ದಿನಗಳ ಅನುಗ್ರಹಗಳನ್ನು ರಮಝಾನಿನ ಅನುಗ್ರಹಗಳೊಂದಿಗೆ ಜೋಡಿಸಲು ಪ್ರಯತ್ನ ಮಾಡುವುದಾದರೆ ನಮ್ಮಲ್ಲಿ ಒಂದು ಆಧ್ಯಾತ್ಮಿಕ ಕ್ರಾಂತಿ ಉಂಟಾಗಲು ಸಾಧ್ಯವಿದೆ. ನೀವು ಈ ಸಂಕಲ್ಪದಿಂದ ಜಲ್ಸಕ್ಕೆ ಬಂದಿಲ್ಲವಾದರೆ, ಅಥವಾ ಈ ದಿನಗಳು ನಿಮ್ಮಲ್ಲಿ ಯಾವ ಬದಲಾವಣೆಯನ್ನೂ ಉಂಟುಮಾಡದಿದ್ದರೆ ಅಥವಾ ಅದಕ್ಕೋಸ್ಕರ ಪ್ರಯತ್ನ ನಡೆಸುವುದಿಲ್ಲವಾದರೆ, ನೀವು ಈ ಜಲ್ಸಕ್ಕೆ ಬರುವುದೂ ಬರದೆ ಇರುವುದೂ ಒಂದೇ ಆಗಿದೆ. ಮಾತ್ರವಲ್ಲ, ಕೆಲವು ಸಾರಿ ಅದು ನಿಮಗೆ ಹಾನಿಕರವೂ ಆಗಬಹುದು. ಕೆಲವು ಸಾರಿ ಅದು ದಾರಿತಪ್ಪಲು ಹೇತುವಾಗಲೂ ಬಹುದಾಗಿದೆ.

ಸಹನೆಯೊಂದಿಗೆ ಜಲ್ಸದಲ್ಲಿ ಭಾಗವಹಿಸಿ ಅದರ ಉದ್ದೇಶ ಲಕ್ಷ್ಯವನ್ನು ಗಳಿಸುವ ಗುರಿ ಹೊಂದಿದ್ದರೆ ಒಬ್ಬನ ಸತ್ಯವಿಶ್ವಾಸವು ವರ್ಧಿಸುವುದಲ್ಲದೆ ಆತನು ಅನೇಕ ಜನರಿಗೆ ಮಾರ್ಗದರ್ಶನ ನೀಡಬಲ್ಲವನೂ ಆಗಬಲ್ಲನು. ಅಲ್ಲಾಹನ ಅನುಗ್ರಹದಿಂದ ಅಹ್ಮದಿಯ್ಯತ್ತಿನ ಲೋಕದಲ್ಲಿ ಈಗ ಎಲ್ಲಾ ಸ್ಥಳಗಳಲ್ಲೂ ಜಲ್ಸಗಳು ಜರಗಿಸಲ್ಪಡುತ್ತವೆ. ಅನೇಕ ರಾಜ್ಯಗಳಲ್ಲಿ ಜಲ್ಸಗಳು ಜರಗುತ್ತವೆ. ಜಮಾಅತ್‌ಗಳು ವರ್ಧಿಸುತ್ತಿವೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬುವವರು ವಿವಿಧ ಜನಾಂಗಗಳಿಗೂ ಬುಡಕಟ್ಟುಗಳಿಗೂ ಸೇರಿದವರಾಗಿದ್ದಾರೆ. ಅದರ ಕಾರಣದಿಂದ ಲೋಕದಲ್ಲಿ ಮಾರ್ಗದರ್ಶನ ವಿಶಾಲವಾಗಿ ಹರಡುತ್ತಾ ಇದೆ. ಆ ಕಾರಣದಿಂದ ನಾವು ಅಲ್ಲಾಹನ ಸನ್ನಿಧಿಯಲ್ಲಿ ಬಾಗುವವರಾಗುತ್ತೇವೆ. ಯಾವನಾದರೊಬ್ಬ ದುರದೃಷ್ಟಶಾಲಿ ಮನುಷ್ಯ, ತನ್ನ ವಿಶ್ವಾಸವನ್ನು ನಾಶಮಾಡುವವನಾದರೆ ಅವನಿಗೆ ಬದಲಾಗಿ ನೂರಾರು ಅದೃಷ್ಟಶಾಲಿಗಳು ಸತ್ಯ ವಿಶ್ವಾಸವನ್ನು ಸ್ವೀಕರಿಸುವವರಾಗಿಯೂ ಆಗಮಿಸುತ್ತಾರೆ. ಅಂತಹ ಉದಾಹರಣೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕಾಲದಲ್ಲೂ ಕಂಡು ಬರುತ್ತಿದ್ದುವು. ಈಗಲೂ ಕಂಡುಬರುತ್ತವೆ. ಈಗ ನಾನು ಒಂದು ಉದಾಹರಣೆ ನೀಡುತ್ತೇನೆ. ಸಾವಿರಾರು ಮೈಲುಗಳಷ್ಟು ದೂರದಲ್ಲಿದ್ದು ತಮ್ಮ ವಿಶ್ವಾಸದಲ್ಲಿ ವರ್ಧನೆಯನ್ನು ಹೊಂದಿದವರು ಅನ್ಯರಿಗೆ ಮಾರ್ಗದರ್ಶನ ನೀಡುವವರಾದರು. ಅವರಲ್ಲಿ ಅನೇಕ ಜನರು ಬಹುಶಃ ಖಲೀಫರನ್ನು ನೋಡಿಯೇ ಇಲ್ಲ. ಯಾರಾದರೂ ಖಲೀಫರನ್ನು ಭೇಟಿಯಾಗಿದ್ದರೆ ಸಹ ಅದು ಇಪ್ಪತ್ತೈದು ಮೂವತ್ತು ವರ್ಷಗಳ ಹಿಂದೆ. ಆದರೆ ಈ ಜನರು ಅನ್ಯರಿಗೆ ಮಾರ್ಗದರ್ಶನ ನೀಡುವವರಾಗುವುದು ಹೇಗೆ, ಈ ಜನರು ತಮ್ಮ ವಿಶ್ವಾಸವನ್ನು ವರ್ಧಿಸಿಕೊಳ್ಳುವುದು ಹೇಗೆ ಎಂಬ ಬಗ್ಗೆ ಯೋಚಿಸುವಾಗ ಆಶ್ಚರ್ಯ ಉಂಟಾಗುತ್ತದೆ.

ಆಫ್ರಿಕದ ಸಿಯೆರ್ರಾಲಿಯೋನ್ ದೇಶದ ಒಂದು ಘಟನೆ ಹೀಗಿದೆ. ಕೋಟ್‌ಲೋಕೋ ಎಂಬ ಪ್ರದೇಶದ ಮುಅಲ್ಲಿಮ್ ಬರೆಯುತ್ತಾರೆ. ಕೆಫೇ ಚ್ಯುಡಂ ಎಂಬಲ್ಲಿನ ಚೀಫ್ ಇಮಾಮ್ ಮತ್ತು ಡಿಪ್ಯುಟಿ ಇಮಾಮ್ ಶೇಖ್ ಆದಮ್ ನಮ್ಮ ಜಮಾಅತಿನ ಕಠಿಣ ವಿರೋಧಿಗಳಾಗಿದ್ದರು. ಅಲ್ಲಿನ ನಮ್ಮ ಮುಅಲ್ಲಿಮ್ ಶೇಖ್ ಇಬ್ರಾಹೀಮ್ ತೋರೇ ಸಾಹೇಬರು ಅವರೊಂದಿಗೆ ಜಮಾಅತ್ ಬಗ್ಗೆ ಚರ್ಚೆ ನಡೆಸುತ್ತಾ ಇದ್ದರು. ಸಿಯಾರ್ರಾಲಿಯೋನಿನ ಜಲ್ಸ ಸಾಲಾನಕ್ಕೆ ಅತಿಥಿಗಳಾಗಿ ಬರಲು ಚೀಫ್ ಇಮಾಮರನ್ನೂ, ಮತ್ತು ಡಿಪ್ಟಿ ಚೀಫ್ ಇಮಾಮರನ್ನೂ ಆಮಂತ್ರಿಸಲಾಯಿತು. ಚೀಫ್ ಇಮಾಮ್ ಬರಲಿಲ್ಲ. ಡಿಪ್ಟಿ ಚೀಫ್ ಇಮಾಮ್ ಶೇಖ್ ಆದಮ್ ಜಲ್ಸಕ್ಕೆ ಆಗಮಿಸಿದರು. ಜಲ್ಸದ ಮೊದಲನೆಯ ದಿನ ರಾತ್ರಿ ತಹಜ್ಜುದ್ ನಮಾಝಿಗಾಗಿ ಒಟ್ಟು ಸೇರಿದರು. ಅದು ಬಹಳ ದೊಡ್ಡ ಸಭೆಯಾಗಿತ್ತು. ನಮಾಝ್ ತಹಜ್ಜುದ್‌ನಲ್ಲಿ ಪವಿತ್ರ ಖುರ್‌ಆನಿನ ಪಾರಾಯಣ ಡಿಪ್ಟಿ ಚೀಫ್ ಇಮಾಮ್ ಆಲಿಸಿದರು. ಜನರು ಅಲ್ಲಾಹನ ಸನ್ನಿಧಿಯಲ್ಲಿ ಅಳುತ್ತಾ ಪ್ರಾರ್ಥಿಸುವುದನ್ನು ಅವರು ಕಂಡರು. ಅವರು ಹೇಳುತ್ತಾರೆ: "ನನ್ನ ಹೃದಯ ಕರಗಿತು, ಜನರು ಆರಾಧನೆಯಲ್ಲಿ ಹೀಗೆ ತಲ್ಲೀನರಾಗುವುದು ಈ ಜನರು ಸತ್ಯವಂತರು ಎಂಬುದರ ಚಿಹ್ನೆಯಾಗಿದೆ. ಇದು ಸತ್ಯವಂತರ ಜಮಾಅತಾಗಿದೆ. ಲೌಕಿಕವಾದಿಗಳಾದ ಜನರು ಈರೀತಿ ಇರಲು ಸಾಧ್ಯವಿಲ್ಲ."

ಮುಬಲ್ಲಿಗ್ ಸಾಹೇಬರು ಹೇಳುತ್ತಾರೆ: ನಾನು ಡಿಪ್ಟಿ ಇಮಾಮ್ ಸಾಹೇಬರೊಂದಿಗೆ ಜಲ್ಸದ ಪ್ರಥಮ ಅಧಿವೇಶನದ ನಂತರ ಕೇಳಿದೆ: 'ಜಲ್ಸದ ಬಗ್ಗೆ ನಿಮ್ಮ ಅಭಿಪ್ರಾಯವೇನು?'. ಇಮಾಮ್ ಸಾಹೇಬರು ಹೇಳಿದರು: "ನಾನು ಅಹ್ಮದಿಯಾ ಜಮಾಅತಿನಿಂದ ಬಹಳಷ್ಟು ಪ್ರಭಾವಿತನಾಗಿರುವೆನು. ನಾನು ಅಹ್ಮದಿಯೇ ಆಗಿದ್ದೇನೆ. ನನ್ನ ಎಲ್ಲಾ ಸಂಶಯಗಳೂ ನಿವಾರಣೆಯಾಗಿವೆ."

ಇಮಾಮ್ ಸಾಹೇಬರು ಮರಳಿ ಹೋಗಿ ತನ್ನ ಪ್ರದೇಶದಲ್ಲಿ "ಅಹ್ಮದಿಯಾ ಜಮಾಅತ್ ಸರಿಯಾದ ಇಸ್ಲಾಮನ್ನು ಪ್ರಚಾರ ಮಾಡುತ್ತಿದೆ" ಎಂದು ತಬ್ಲೀಗ್ ಮಾಡತೊಡಗಿದರು. ಅವರ ಚೀಫ್ ಇಮಾಮ್ ಸಿಟ್ಟುಗೊಂಡು ಡಿಪ್ಟಿ ಇಮಾಮರನ್ನು ಕೆಲಸದಿಂದ ತೆಗೆದು ಹಾಕಿದರು. ಡಿಪ್ಟಿ ಇಮಾಮ್ ಹೇಳಿದರು: "ನನಗೆ ಸತ್ಯ ಲಭಿಸಿದೆ. ನಾನು ಜಮಾಅತ್‌ಗೋಸ್ಕರ ಎಲ್ಲವನ್ನೂ ಬಿಡಲು ಸಿದ್ಧನಾಗಿದ್ದೇನೆ. ನಾನು ಸತ್ಯವನ್ನು ಬೆಂಬಲಿಸುವೆನು." ಅಲ್ಲಾಹನ ಅನುಗ್ರಹದಿಂದ ಆ ಪ್ರದೇಶದಲ್ಲಿ ಅವರ ಮೂಲಕ ಬಹಳ ಜನರು ಅಹ್ಮದಿಯರಾಗಿರುವರು.

ಹಾಗೆ, ಒಂದು ಜಲ್ಸ ಒಬ್ಬ ವ್ಯಕ್ತಿಯನ್ನು ಅಹ್ಮದಿಯನ್ನಾಗಿ ಮಾಡಿತು. ಅವರ ಮೂಲಕ ನೂರಾರು ಜನರಿಗೆ ಈ ಕಾಲಘಟ್ಟದ ಇಮಾಮರನ್ನು ನಂಬಲು ಮತ್ತು ಅಹ್ಮದಿಯರಾಗಲು ಭಾಗ್ಯ ಲಭಿಸಿತು. ಶೇಖ್ ಆದಮ್ ಸಾಹೇಬರು ಜಲ್ಸದ ಕಾರಣ ಅಹ್ಮದಿಯರಾದುದರಿಂದ ತನ್ನ ಹೆಸರನ್ನು 'ಶೇಖ್ ಆದಮ್ ಜಲ್ಸಸಾಲಾನ' ಎಂದು ಬದಲಾಯಿಸಿಕೊಂಡಿದ್ದಾರೆ.

ಜಲ್ಸ ಹಲವು ಆದಮ್‌ರನ್ನು ಹುಟ್ಟಿಸುತ್ತದೆ. ಅಲ್ಲಾಹನು ಅವರ ಸ್ಥಿತಿಗಳನ್ನು ಬದಲಾಯಿಸಿ ಹೊಸ ಭೂಮಿಗಳನ್ನೂ ಹೊಸ ಆಕಾಶವನ್ನೂ ಸೃಷ್ಟಿಸುತ್ತಿದ್ದಾನೆ. ನಾವು ಸಹ ನಮ್ಮ ಬಗ್ಗೆ ಬಹಳಷ್ಟು ಯೋಚಿಸಬೇಕಾಗಿದೆ. ನಮ್ಮಲ್ಲಿ ಬಹುತೇಕ ಜನರು ಜನನ ಮೂಲಕ ಅಹ್ಮದಿಯರಾದವರಾಗಿದ್ದಾರೆ. ನಾವು ನಮ್ಮ ಸ್ಥಿತಿಯನ್ನು ದುರಸ್ತಿ ಮಾಡಿಕೊಳ್ಳಬೇಕಾಗಿದೆ.

ಜಲ್ಸಗಳ ಅನುಗ್ರಹಗಳು ಲೋಕದಲ್ಲಿ ಪ್ರಕಟವಾಗುತ್ತಾ ಇವೆ. **ಅಹ್ಮದಿಯತ್ತಿನ ಲೋಕದಲ್ಲಿ ಒಳಿತಿನೆಡೆಗೆ ಮುಂದೆ ಸಾಗಲು ಒಂದು ಓಟ ಆರಂಭವಾಗಿದೆ. ಆದುದರಿಂದ ನೀವು ಈ ಓಟದಲ್ಲಿ ಹಿಂದೆ ಉಳಿಯದಿರಲು ಪ್ರಯತ್ನ ಮಾಡಿರಿ. ಒಂದು ಕಾಲವಿತ್ತು, ಆಗ ನಗರಗಳು ಪರಸ್ಪರ ಒಳಿತಿನಲ್ಲಿ ಸ್ಪರ್ಧಿಸುತ್ತಿತ್ತು. ಈಗ ರಾಷ್ಟ್ರಗಳು ತಮ್ಮೊಳಗೆ ಸ್ಪರ್ಧಿಸುತ್ತಿವೆ. ಅಲ್ಲಾಹನು ಯಾರನ್ನು ಕಳುಹಿಸಿರುವನೋ ಅವರು ಹೊಂದಿದ್ದ ನೋವು ಅರ್ಥ ಮಾಡಿಕೊಂಡು ತಮ್ಮನ್ನು ಸುಧಾರಣೆ ಮಾಡಿಕೊಳ್ಳಲು ಪ್ರಯತ್ನಿಸುವವರೇ ಅಲ್ಲಾಹನ ಸಾಮೀಪ್ಯ ಗಳಿಸುವವರಾಗಿದ್ದಾರೆ.**

ಈಗ ನಾನು ಕೆಲವು ಮಾತುಗಳನ್ನು ಇಲ್ಲಿನ ಕಾರ್ಯಕರ್ತರೊಂದಿಗೆ, ವಿಶಿಷ್ಟವಾಗಿ ಅತಿಥಿ ಸತ್ಕಾರದ ಜವಾಬ್ದಾರಿ ವಹಿಸುವ ಕಾರ್ಯಕರ್ತರೊಂದಿಗೆ ಹೇಳಲು ಬಯಸುತ್ತೇನೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನ್ನ ಅತಿಥಿಗಳೊಂದಿಗೆ ಬಹಳ ವಿಶಾಲ ಹೃದಯದಿಂದ ವರ್ತಿಸುತ್ತಿದ್ದರು. ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಹೀಗೆ ಹೇಳಿದ್ದನು: "ಅತಿಥಿಗಳ ಆಗಮನದಿಂದ ಬಳಲಿ ಹೋಗಬಾರದು ಅದರ ಬಗ್ಗೆ ಗಾಬರಿಗೊಳ್ಳಬಾರದು".

ಅಲ್ಲಾಹನ ಈ ಆಜ್ಞೆ ಅತಿಥಿ ಸತ್ಕಾರಕ್ಕೆ ನಿಯೋಗಿಸಲಾದ ಕಾರ್ಯಕರ್ತರಿಗೂ ಅನ್ವಯಿಸುತ್ತದೆ. ಇದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕಾಲದ ಕಾರ್ಯಕರ್ತರಿಗೂ ಆ ನಂತರದ ಕಾರ್ಯಕರ್ತರಿಗೂ ಅನ್ವಯಿಸುತ್ತದೆ. ಇದು ಕಾರ್ಯಕರ್ತರಿಗೆ ಅನುಗ್ರಹ ಸಂಪಾದಿಸುವ ಸಂದರ್ಭವೂ ಆಗಿರುತ್ತದೆ.

ಆದುದರಿಂದ ಈ ದಿನಗಳಲ್ಲಿ ಅತಿಥಿಗಳ ಬಗ್ಗೆ ವಿಶಿಷ್ಟವಾಗಿ ಲಕ್ಷ್ಯ ನೀಡಬೇಕು. ಕೇವಲ ಜಲ್ಸದ ಕಾಲದಲ್ಲಿ ಮಾತ್ರವಲ್ಲ ಸಾಮಾನ್ಯ ಸಂದರ್ಭಗಳಲ್ಲೂ ಅದರ ಬಗ್ಗೆ ಗಮನ ನೀಡಬೇಕು. ಪವಿತ್ರ ಖುರ್‌ಆನ್ ನಮಗೆ **ಹಝ್ರತ್ ಇಬ್ರಾಹೀಮ್ ಅಲೈಹಿಸ್ಸಲಾಮರು ಅತಿಥಿಗಳನ್ನು ಸತ್ಕರಿಸಿದ ಬಗ್ಗೆ ತಿಳಿಸಿದೆ**. ಅತಿಥಿಗಳೊಂದಿಗೆ **"ನಾವು ನಿಮ್ಮನ್ನು ಸತ್ಕರಿಸಬೇಕೋ ಬೇಡವೋ?"** ಎಂದು ಕೇಳಬಾರದು. ಯಾವುದೇ ರೀತಿಯ ಖರ್ಚಿನ ಬಗ್ಗೆ ಹೆದರಬಾರದು. ಅತಿಥಿ ಸತ್ಕಾರ ಮಾಡಬೇಕು ಮತ್ತು ಅತಿಥಿಯ ನೆಮ್ಮದಿಯ ಬಗ್ಗೆ ಗಮನಿಸಬೇಕು. **ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಸಹ ಅತಿಥಿ ಸತ್ಕಾರದ ಬಗ್ಗೆ ಉಪದೇಶಿಸಿದ್ದಾರೆ. ಮದೀನದಲ್ಲಿರುವ ತನ್ನ ಶಿಷ್ಯರು ಹೊರಗಿನಿಂದ ಬಂದ ಅತಿಥಿಗಳಿಗೆ ಸುಖಸೌಲಭ್ಯ ನೀಡಿದರು, ತಮಗಿಂತ ಹೆಚ್ಚಿನ ಮಟ್ಟಿಗೆ ಅವರಿಗೆ ನೆಮ್ಮದಿ ದೊರಕಲು ಪ್ರಯತ್ನಿಸಿದರು,** ತಮ್ಮ ಶಕ್ತಿ ಸಾಮರ್ಥ್ಯಕ್ಕಿಂತ ಮಿಗಿಲಾಗಿ ಅವರನ್ನು ಸತ್ಕರಿಸಿದರು ಎಂದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರಿಗೆ ಸಮಾಚಾರ ದೊರೆಯುವಾಗ ಅವರ ಮುಖ ಸಂತೋಷದಿಂದ ಹೊಳೆಯುತ್ತಿತ್ತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಅತಿಥಿಗಳೊಂದಿಗೆ ವರ್ತಿಸಿದ ಉದಾಹರಣೆಗಳು ಸಹ ನಮ್ಮ ಮುಂದಿದೆ.

ಆದುದರಿಂದ, ಇಲ್ಲಿನ ಜಲ್ಸದ ವ್ಯವಸ್ಥಾಪಕರೊಂದಿಗೆ ನಾನು ಹೇಳಲು ಇಚ್ಛಿಸುತ್ತೇನೆ: ಅವರು ಅತಿಥಿ ಸತ್ಕಾರದ ಮಹತ್ವವನ್ನು ಅರಿತುಕೊಳ್ಳಬೇಕು. ಒಂದು, ಜಲ್ಸದ ಸಂದರ್ಭದಲ್ಲಿ ಇಲ್ಲಿ ನಡೆಸಲಾಗುವ ಅತಿಥಿ ಸತ್ಕಾರ. ಇನ್ನೊಂದು, ಸಾಮಾನ್ಯ ದಿನಗಳಲ್ಲಿ ನಡೆಸುವ ಅತಿಥಿ ಸತ್ಕಾರವಾಗಿದೆ. ಸಾಮಾನ್ಯ ದಿನಗಳಲ್ಲಿ ಆಗಮಿಸುವ ಅತಿಥಿಗಳ ಪ್ರತಿಯೊಂದು ಆವಶ್ಯಕತೆಯನ್ನು ಅವರ ಮನೋಭಾವಕ್ಕೆ ಅನುಸಾರವಾಗಿ ಈಡೇರಿಸಲು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪ್ರಯತ್ನಿಸುತ್ತಿದ್ದರು. ಆದುದರಿಂದ ಅತಿಥಿ ಸತ್ಕಾರಕ್ಕೆ ಸಂಬಂಧಿಸಿದವರು ಇದರ ಬಗ್ಗೆ ಗಮನಿಸುವುದು ಆವಶ್ಯಕವಾಗಿದೆ. **ಅತಿಥಿಗೆ ಆಹಾರ ನೀಡುವುದರಿಂದ ಮಾತ್ರ ಅತಿಥಿ ಸತ್ಕಾರದ ಕರ್ತವ್ಯ ಈಡೇರಿಸಿದಂತೆ ಆಗುವುದಿಲ್ಲ. ಅದರಿಂದ ಅತಿಥಿಗೆ ಸೇವೆ ಸಲ್ಲಿಸಿದಂತೆ ಆಗುವುದೇ ಇಲ್ಲ**.

ಜಲ್ಸದ ಸಂದರ್ಭದಲ್ಲಿ ಜನರು ತಮ್ಮ ಸುತ್ತು ಮುತ್ತಲೂ ಗಮನಿಸುತ್ತಾ ಇರಬೇಕಾದುದು ಅತೀ ಆವಶ್ಯಕವಾಗಿದೆ. ಜಲ್ಸದಲ್ಲಿ ಭಾಗವಹಿಸುವ ಪ್ರತಿಯೊಬ್ಬರೂ ಡ್ಯೂಟಿಯಲ್ಲಿರುವ ಕಾರ್ಯಕರ್ತರೊಂದಿಗೆ ಪೂರ್ಣ ಸಹಕಾರ ನೀಡಿರಿ. ಸೆಕ್ಯುರಿಟಿಯ ಸಮಸ್ಯೆ ಈಗ ಎಲ್ಲಾ ಕಡೆ ಇದೆ. ಆದುದರಿಂದ ಜಾಗರೂಕರಾಗಿರುವ ಆವಶ್ಯಕತೆ ಇದೆ. ಅಲ್ಲಾಹನು ಈ ಜಲ್ಸವನ್ನು ಎಲ್ಲಾ ರೀತಿಗಳಲ್ಲೂ ಯಶಸ್ವಿಗೊಳಿಸಲಿ. ಈ ಜಲ್ಸದೊಂದಿಗೆ ಸಂಬಂಧಿಸಿರುವ ಅನುಗ್ರಹಗಳನ್ನು ಬಾಚಿಕೊಳ್ಳಲು ಈ ಜಲ್ಸದಲ್ಲಿ ಭಾಗವಹಿಸುವ ಎಲ್ಲರಿಗೂ ಭಾಗ್ಯ ಲಭಿಸಲಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಆಗಮನದ ಉದ್ದೇಶಲಕ್ಷ್ಯಗಳನ್ನು ನಾವು ಈಡೇರಿಸುವವರಾಗೋಣ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನ್ನ ಜಮಾಅತಿನ ಬಗ್ಗೆ ಹೊಂದಿರುವ ಪ್ರತೀಕ್ಷೆಗಳನ್ನು ನಾವು ನಮ್ಮ ಜೀವನದ ಭಾಗಗಳನ್ನಾಗಿ ಮಾಡುವವರಾಗೋಣ. ಅಲ್ಲಾಹನು ನಮಗೆ ಆ ಸೌಭಾಗ್ಯ ನೀಡಲಿ– **ಆಮೀನ್**.

**----------------*****----------------**

*Friday Sermon delivered by Hadrath Khaleefatul Masih Al Khamis(atba)*

*at Jalsa Salana, German on 13-06-2014*

***Kannada Translation:*** M Ubeidullah

***Reviewed by:*** M P Ibrahim | ***Typing:*** U Basheer Ahmad

*Published By: **Kannada Khutuba Desk*** (comes under the **Kannada Isha'at Team**)

*Ahmadiyya Muslim Jama`at, Karnataka*

***Email***: **khutuba.kannada@gmail.com**